**◆ ಯಕ್ಷಗಾನವು ಮುಖ್ಯವಾಗಿ ಅರ್ಥಗಾರಿಕೆ ಅಥವಾ ಮಾತಿನ ಮೂಲಕವೇ ಅಗಾಧವಾಗಿ ಬೆಳೆದಿದೆ. ನೀವು ನಾಟ್ಯ ಮಾತ್ರವಲ್ಲದೆ, ಅರ್ಥಗಾರಿಕೆಯನ್ನೂ ಸಮರ್ಥವಾಗಿ ರಂಗದ ಮೇಲೆ ನಿಭಾಯಿಸಿದವರು. ಅರ್ಥಗಾರಿಕೆಯು ಶಿಥಿಲವಾಗುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ನಿಮ್ಮ ಮಾತಿನ ಬಲ ಯಾವುದಾಗಿತ್ತು?**

ಬಾಲ್ಯದಲ್ಲಿ ಹೊಟ್ಟೆಪಾಡಿಗಾಗಿ ಯಕ್ಷಗಾನದ ಬೆಂಬತ್ತಿ ನಡೆದರೂ ನಾನು ಅದರಲ್ಲಿಯೇ ಮುಂದುವರೆಯುತ್ತಿದ್ದಂತೆಯೇ, ಪ್ರಸಂಗವನ್ನು ಚೆನ್ನಾಗಿ ನಿರ್ವಹಿಸಬೇಕಾದರೆ ನಾಟ್ಯ ಮತ್ತು ಪುರಾಣ ಜ್ಞಾನ ಚೆನ್ನಾಗಿರಬೇಕು ಎನ್ನುವುದು ಅರಿವಿಗೆ ಬಂತು. ಹಿರಿಯ ಕಲಾವಿದರಾದ ರಾಮದಾಸ ಸಾಮಗರು, ಕೇವಲ ಹೊಟ್ಟೆ ಹೊರೆಯುವುದಕ್ಕೆ ಈ ಕಲಾಪ್ರಕಾರವನ್ನು ನೆಚ್ಚಿಕೊಂಡರೆ ಸಾಲದು, ಜನರಿಗೆ ನೀತಿಬೋಧೆಯನ್ನು ಮಾಡುವುದು ಕಲಾವಿದನ ಜವಾಬ್ದಾರಿ ಎಂದು ಆಗಾಗ ಹೇಳುತ್ತಿದ್ದರು. ಇದೊಂದು ಉಪಾಸನಾ ಕಲೆಯೆಂದು ನನಗೆ ಮನದಟ್ಟಾಗುತ್ತಾ ಹೋಯಿತು. ನಿಧಾನವಾಗಿ ನಾನು ಪುಸ್ತಕಗಳನ್ನು ಓದಲು ಆರಂಭಿಸಿದೆ. ದಿನಕ್ಕೆ ಎರಡು ಗಂಟೆಯಾದರೂ ಓದುವುದನ್ನು ಅಭ್ಯಾಸ ಮಾಡಿಕೊಂಡೆ. ಓದು ಪುರಾಣಗಳಿಗೆ ಸೀಮಿತವಾಗಿರಲಿಲ್ಲ. ಕುವೆಂಪು, ಡಿವಿಜಿ, ದೇವುಡು ಅವರ ಕೃತಿಗಳು ಬಹಳ ಇಷ್ಟವಾಗುತ್ತಿದ್ದವು. ದೇವುಡು ಅವರ 'ಮಹಾಬ್ರಾಹ್ಮಣ' ಕೃತಿಯನ್ನು ಓದಿ ಬಹಳಷ್ಟು ಪ್ರಭಾವಿತನಾಗಿದ್ದೆ. ವಿಶ್ವಾಮಿತ್ರ ಮತ್ತು ಕೌರವನ ಪಾತ್ರಗಳು ನನಗೆ ಬಹಳವೇ ಇಷ್ಟ. ವಿಶ್ವಾಮಿತ್ರನ ಮಹತ್ವಾಕಾಂಕ್ಷೆ ನನ್ನ ಗಮನ ಸೆಳೆಯಿತು. ವಸಿಷ್ಠನ ನಿರಾಕರಣೆಯೇ ವಿಶ್ವಾಮಿತ್ರನಿಗೆ ಪ್ರೇರಣೆ. ಅವರಿಬ್ಬರು ವಿರೋಧಿಗಳಲ್ಲ. 'ನೀನು ಅರ್ಹನಲ್ಲ' ಎಂಬ ವಸಿಷ್ಠನ ನಿರಾಕರಣೆಯನ್ನು ಸವಾಲಾಗಿ ಸ್ವೀಕರಿಸಿ, ನಾನೂ ಅರ್ಹತೆಯನ್ನು ಸಂಪಾದಿಸಬಲ್ಲೆ ಎಂದು ತೋರಿಸಿಕೊಡುವ ಛಲ ಮಿಗಿಲಲ್ಲವೇ?

ನಂದಿಕೇಶ್ವರನ 'ಅಭಿನಯ ದರ್ಪಣ', ಆದ್ಯ ರಂಗಾಚಾರ್ಯರು ಅನುವಾದಿಸಿದ 'ಭರತನ ನಾಟ್ಯಶಾಸ್ತ್ರ' ಓದಿ ಬೆರಗಾಗಿದ್ದೇನೆ. ಭರತನ ಕೃತಿ ರಂಗದ ಮೇಲಿನ ಆಗುಹೋಗುಗಳನ್ನು ವಿವರಿಸುವ ಕೃತಿ. ಹಾಗೆಂದು 'ನಾಟ್ಯಶಾಸ್ತ್ರ'ವನ್ನೇ



ಆಧರಿಸಿಕೊಂಡು ಕಾರ್ಯಕ್ರಮವನ್ನು ಮಾಡುವುದು ಕಷ್ಟ. ಜನರ ಅಪೇಕ್ಷೆಯನ್ನೂ, ಕಾಲದ ಬೇಡಿಕೆಯನ್ನೂ ಕೊಂಚವಾದರೂ ಪರಿಗಣಿಸದೇ ಇದ್ದರೆ ಮೇಳ ನಡೆಯಬೇಕಲ್ಲ. ಅದೇನೇ ಇರಲಿ, ನಾನು ರಂಗಸ್ಥಳದಲ್ಲಿ ಪ್ರದರ್ಶಿಸುವ ಕುಣಿತಗಳ ಹಿನ್ನೆಲೆಯನ್ನು ಹೀಗೆ ಓದಿನ ಮೂಲಕ ಹೆಚ್ಚು ಹೆಚ್ಚು ಅರ್ಥ ಮಾಡಿಕೊಳ್ಳುವುದು ಸಾಧ್ಯವಾಯಿತು. ಈ ಅರಿವು ದೊರೆತ ಮೇಲೆ ನನಗೆ ಯಕ್ಷಗಾನದ ನಾಟ್ಯದಲ್ಲಿ ವಿಸ್ತಾರ ಮಾಡಿಕೊಳ್ಳಲು ಸಾಧ್ಯವಾಯಿತು. ಪರಂಪರಾವಾದಿಗಳು ನನ್ನ ಪ್ರಯತ್ನಗಳನ್ನು ವಿರೋಧಿಸಿದರು. ಆದರೆ, ಪರಂಪರೆ ಎಂದರೆ ಏನು ಎಂದೇ ನನಗೆ ಅರ್ಥವಾಗುವುದಿಲ್ಲ. 'ಇದು ಪರಂಪರೆ' ಎಂದು ನಿರ್ಧರಿಸಿ ನಾವು ಯಾವ ಕಾಲಘಟ್ಟವನ್ನು ಹೇಳಬಹುದು? ಅದಕ್ಕಿಂತ ಹಿಂದೆ